2) ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

3) ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಅಧ್ಯಕ್ಷರು :– ಮುಂಡಿಸಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ :– ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ 17 ರಿಂದ ನಮಗೆ ಉತ್ತರ ಬಂದಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಮಂತ್ರಿಗಳು ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ನಮಗೆ ಉತ್ತರಗಳೇ ಬಂದಿಲ್ಲ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :– ದಿನಾಂಕ 17, 18 ಹಾಗೂ 19 ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ನಮಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು :– ಈ ಸಮಸ್ಯೆ ನಮ್ಮ ಕಾರ್ಯಾಲಯದಲ್ಲಿ ಉದ್ಭವವಾಗಿದೆ. 126 ಲಿಖಿತ ಮೂಲಕ ಉತ್ತರ ಕೇಳಿದ ಪ್ರಶ್ನೆಗಳ ಪಟ್ಟಿ ಇತ್ತು. ನಿನ್ನೆ ಮಧ್ಯಾಹ್ನ 3 ಗಂಟೆಯವರೆಗೂ ಕೂಡ ಉತ್ತರಗಳು ಬರುತ್ತಿದ್ದವು. ಆದ್ದರಿಂದ ಅವುಗಳನ್ನು ಒಟ್ಟಿಗೆ ಸೇರಿಸಿ ಸೈಕ್ಲೊಸ್ಟೈಲ್ ಮಾಡಿ ತಮಗೆ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರ ತಮ್ಮ ಕ್ಷಮೆಯನ್ನು ಕೇಳಿ, ಅದನ್ನು ಸರಿಪಡಿಸುವುದಕ್ಕೆ ನಾಳೆಯಿಂದ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ :– ಹಾಲಿನ ಬೆಲೆ ಏರಿಸುವ ಬಗ್ಗೆ.

† ಶ್ರೀ ಸಿ. ಬೈರೇಗೌಡ :– ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆ. ಅದನ್ನು ನಾಳೆ ಪ್ರಸ್ತಾಪ ಮಾಡಿ ಎಂದು ತಾವು ತಿಳಿಸಿದ್ದೀರಿ. ವಿಷಯ ಏನೆಂದರೆ, ದಿನಾಂಕ 26–11–90 ರಂದು ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ರಾಜ್ಯದಲ್ಲಿರತಕ್ಕ ರೈತರಿಗೆ ಹಾಲಿನ ಬೆಲೆಯನ್ನು ಈಗ ಏನು ಕೊಡುತ್ತಿದ್ದಾರೆ, ಅದನ್ನು ಕಳೆದ ಸುಮಾರು ಒಂದೂವರೆ ವರ್ಷಗಳಿಂದ ಏರಿಸಿಲ್ಲ. ಆದರಿಂದ ಲಕ್ಷಾಂತರ ಜನ ರೈತರಿಗೆ ಈವೊತ್ತಿನ ದಿವಸ ನಷ್ಟ ಉಂಟಾಗುತ್ತಿದೆ. ಹಾಗೂ ಅನೇಕರು ತಮ್ಮ ಹಸು, ಎಮ್ಮೆಗಳನ್ನು ಬಂದ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಇವತ್ತು ಲಕ್ಷಾಂತರ ಜನರು ಹಾಲಿನ ಉತ್ಪಾದನೆ ಮಾಡತಕ್ಕವರು, ಸಣ್ಣ ಹಾಗೂ ಅತಿ ಸಣ್ಣ ರೈತರು ಆಗಿರುತ್ತಾರೆ. ಇವತ್ತು ಅನೇಕರಿಗೆ ಜೀವನ ಮಾರ್ಗ ಹಾಲಿನ ಉತ್ಪಾದನೆಯಿಂದ ಆಗಬೇಕು ಹಾಗೂ ಹಾಲನ್ನು ಮಾರಾಟ ಮಾಡುತ್ತಿರುವುದರಿಂದ ಅವರ ಜೀವನ ಆಗಬೇಕು. ಆದ್ದರಿಂದ ಹಾಲಿನ ಬೆಲೆಯನ್ನು ಹೆಚ್ಚು ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೇವೆ. ಆವೊತ್ತಿನ ದಿವಸ ಮಾನ್ಯ ಬಸವಲಿಂಗಪ್ಪನವರ ಉತ್ತರವನ್ನು ಖಿಡಾಖಿಂಡಿತವಾಗಿ ಕೊಟ್ಟಿದ್ದಾರೆ. ನಾನು ಎಲ್ಲವನ್ನು ಓದುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಹಾಗೆ 3–4 ಸಾಲುಗಳನ್ನು ಓದುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಈ ರೀತಿ ಹೇಳುತ್ತಾರೆ :– "ಮಾನ್ಯ ಸದಸ್ಯರು ಏನು ವಿಷಯ ಹೇಳುತ್ತಿದ್ದಾರೆ, ಅದೆಲ್ಲ ಸಂಪೂರ್ಣ ನನಗೆ ಒಪ್ಪಿಗೆ ಇದೆ. ಯಾವ ರೂಪದಲ್ಲಿ ಎಷ್ಟೆಷ್ಟು ಮಾಡಬೇಕೆನ್ನುವುದರ ಬಗ್ಗೆ ಇನ್ನು 15 ದಿವಸಗಳೊಳಗಾಗಿ ತೀರ್ಮಾನ ಮಾಡುತ್ತೇವೆನ್ನುವ ಖಿಡಾಖಿಂಡಿತವಾದ ಉತ್ತರವನ್ನು ದಿನಾಂಕ 26–11–90 ರಲ್ಲಿ ಈ ಸಭೆಗೆ ತಿಳಿಸಿದ್ದಾರೆ. ಇವತ್ತು 19–12–90. ಇಲ್ಲಿಗೆ ಸುಮಾರು 23–24 ದಿವಸಗಳಾಯಿತು. ಆದರೆ ಇಲ್ಲಿಯವರೆಗೂ ಕೂಡ ಹಾಲಿನ ಬೆಲೆಯನ್ನು ಹೆಚ್ಚಿಸಿಲ್ಲ. ಅವರು ಹೇಳಿದ ಮಾತಿನ ಪ್ರಕಾರ ಅವರು ನಡೆದುಕೊಂಡಿಲ್ಲ. ಆದ್ದರಿಂದ ಇದು ಈ ಸದನದ ಹಕ್ಕಿನ ಚ್ಯುತಿ ಆಗಿದೆ. ಅವರ ಮೇಲೆ ತಾವು ನೇರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಾರಣವೇನೆಂದರೆ, ಹೆಚ್ಚಿಗೆ ಚರ್ಚೆ ಏನೂ ಇಲ್ಲ. ಎಲ್ಲ ಬಹಳ ಸ್ಪಷ್ಟವಾಗಿದೆ. ಇದನ್ನು ಸಮಿತಿಗೆ ಕಳಿಸುವ ಅಗತ್ಯವೂ ಇಲ್ಲ. ಆದ್ದರಿಂದ ನೇರವಾಗಿ ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. Speaker :– Please see page 237 of Kaul & Shakdher's Practice and Procedure of Parliament. "Non-implementation of an assurance given by a Minister on the floor of

the House is neither a breach of privilege nor a contempt of the House., for the process of implementation of a policy matter is conditional on a no. of factors....."

ನಾನು ನಿಮಗೆ ಸಹಾಯ ಮಾಡಲಿಕ್ಕೆ ಹೇಳುತ್ತಿದ್ದೇನೆ; ಈ ವಿಷಯ ಈ ಸದನದ ಭರವಸೆ ಕಮಿಟಿಯ ಮುಂದೆ ಬರಬೇಕು. It has to go before the Assurance Committee.

ಶ್ರೀ ಸಿ. ಬೈರೇಗೌಡ :– ಅದಕ್ಕಿಂತ ಹೆಚ್ಚಾಗಿ ಇದು ಇವತ್ತಿನ ದಿವಸ ಲಕ್ಷಾಂತರ ಜನ ಸಣ್ಣ ಮತ್ತು ಅತಿ ಸಣ್ಣ ರೈತರ ಸಮಸ್ಯೆಯಾಗಿದೆ. ಇದು ಈ ಸದನದ ಹಕ್ಕು ಚ್ಯುತಿಯಾಗುತ್ತದೆ ಇಲ್ಲವೇ ಇದನ್ನು ಪ್ರಿವಿಲೆಜ್ ಕಮಿಟಿ,ಅಥವಾ ಭರವಸೆಗಳ ಸಮಿತಿ ಮುಂದೆ ಬರುತ್ತದೆ ಎನ್ನುವದಕ್ಕಿಂತ ಮುಖ್ಯವಾಗಿ ಸರ್ಕಾರ ಇವತ್ತು ಹಾಲಿನ ಬೆಲೆಯನ್ನು ಹೆಚ್ಚು ಮಾಡಬೇಕಾಗಿದೆ. ಎಲ್ಲಾ ಬೆಲೆ ಜಾಸ್ತಿಯಾಗಿದೆ. ಆದರೆ ಕಳೆದ ಒಂದು–ಒಂದೂವರೆ ವರ್ಷದಿಂದ ಹಾಲಿನ ಬೆಲೆ ಮಾತ್ರ ಹೆಚ್ಚಾಗಿಲ್ಲ. ತತ್‌ಕ್ಷಣ ಹಾಲಿನ ಬೆಲೆಯನ್ನು ಹೆಚ್ಚು ಮಾಡುತ್ತೇವೆಂದು ಸರ್ಕಾರ ಒಂದು ಆಶ್ವಾಸನೆಯನ್ನು ಕೊಟ್ಟರೆ ನನಗೆ ತೃಪ್ತಿಯಾಗುತ್ತದೆ. ಇದರಿಂದ ಲಕ್ಷಾಂತರ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ, ಸರ್ಕಾರದಿಂದ ಈ ಒಂದು ಆಶ್ವಾಸನೆ ದೊರೆತರೆ ನನಗೆ ತೃಪ್ತಿಯಾಗುತ್ತದೆ.

ಅಧ್ಯಕ್ಷರು :– ಮಾನ್ಯ ಬೈರೇಗೌಡರೇ, ನೀವು ಈಗಾಗಲೇ ಒಂದು ಆಶ್ವಾಸನೆಯನ್ನು ತೆಗೆದುಕೊಂಡು ಈ ಪ್ರಿವಿಲೆಜ್‌ನ್ನು ಮಂಡಿಸಿದ್ದೀರಿ; ಈಗ ಇನ್ನೊಂದು ಆಶ್ವಾಸನೆಯನ್ನು ಕೇಳುತ್ತಿದ್ದೀರಿ !

ಶ್ರೀ ಬಿ. ಎಸ್. ಯಡಿಯೂರಪ್ಪ :– ಶ್ರೀ ಬಸವಲಿಂಗಪ್ಪನವರನ್ನು ಒಂದಲ್ಲ ಒಂದು ರೀತಿಯಲ್ಲಿ ಸಿಕ್ಕಿಹಾಕಿಸುವ ಪ್ರಯತ್ನ ನಡೆಯುತ್ತಿದೆ.

ಅಧ್ಯಕ್ಷರು :– ವೈಜ್ಞಾನಿಕವಾಗಿಯೋ, ಅವೈಜ್ಞಾನಿಕವಾಗಿಯೋ ರಾಜ್ಯದಲ್ಲಿ ಹಾಲಿನ ಬೆಲೆಯನ್ನು ಏರಿಸುವುದಕ್ಕೆ ಈಗಾಗಲೇ ಸರ್ಕಾರ ಒಪ್ಪಿಕೊಂಡಿದೆ. 15–20 ದಿವಸಗಳ ಸಮಯ ಕೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಂತ್ರಿಗಳಿಂದ ಉತ್ತರ ಬಂದರೆ ಒಪ್ಪಬಹುದು.

ಶ್ರೀ ಸಿ. ಬೈರೇಗೌಡ :– ಮಾನ್ಯ ಮಂತ್ರಿಗಳು ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಸರಿಯಾದ ಅಂಕಿ ಅಂಶಗಳನ್ನು ಇನ್ನೂ ಕೊಟ್ಟಿರುವುದಿಲ್ಲವೆಂದು ಹೇಳಿದ್ದಾರೆ. ಅಧಿಕಾರಿಗಳಾಗಿರತಕ್ಕವರು ಯಾರು ಈ ಮಾಹಿತಿಯನ್ನು ಒದಗಿಸಿಲ್ಲವೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ಮುಂದಾಗಬೇಕು; ಸುಮ್ಮನೆ ಕುಳಿತರೆ ರೈತರ ಗತಿಯೇನಾಗಬೇಕು ?

ಅಧ್ಯಕ್ಷರು :– ಆಗಬಹುದು.

ಡಾ. ಡಿ. ಬಿ. ಗಂಗಪ್ಪ :– ಹೊನ್ನಾಳಿ ತಾಲ್ಲೂಕಿನಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಮಹಿಳೆಯೊಬ್ಬರು ಸಾವಿಗೀಡಾದ ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಈಗ ಆರೋಗ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ

ಅಧ್ಯಕ್ಷರು :– ಅದನ್ನು ನಾನು ನೋಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು.

ವಿಷಯ :– 1) ಶರಾವತಿ ಸೇತುವೆಯ ದುಸ್ಥಿತಿಯಿಂದಾಗಿ ಸಂಚಾರಕ್ಕೆ ಅನಾನುಕೂಲ.

Sri R. V. Deshapande :– I call the attention of the Hon'ble Chief Minister regarding the inconvenience caused to the traffic due to bad conditions of Sharavathi Bridge.

† ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶರಾವತಿ ಸೇತುವೆಯು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17 ರಲ್ಲಿ ಬರುತ್ತದೆ. ಇದು 93 ಅಡಿ ಉದ್ದದ 34 ಕಂಡಿಗಳನ್ನು (SPAN) ಒಳಗೊಂಡಿದೆ. ಈ ಸೇತುವೆಯನ್ನು 1971 ನೇ ಇಸವಿಯಲ್ಲಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಬಿಡಲಾಗಿದೆ. ಇತ್ತೀಚೆಗೆ ಈ ಸೇತುವೆಯ ಒಂದು ಕಂಡಿಯಲ್ಲಿನ ಒಂದು ಗರ್ಡ್‌ರ್‌ನಲ್ಲಿ